ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು
ADIKAVI SRI MAHARSHI VALMIKI UNIVERSITY, RAICHUR
Krishna Tunga Campus, Mantralay Road(N.H. 167),Yergera -584133, Raichur,Karnataka
ಪರೀಕ್ಷಾ ವಿಭಾಗ
Email: registrarevrur@gmail.com

ಸಂಖ್ಯೆ: ಆಶ್ರೀಮವಾವಿರಾ/ಪರೀಕ್ಷಾ/2026-27/ 796 ದಿನಾಂಕ: 26/11/26

ಆಂತರಿಕ ಚಟುವಟಿಕೆಗಳ ಅಂಕಗಳ ಸಮನ್ವಯ ಸಮಿತಿಯ(IACO-C) ಸದಸ್ಯರಿಗೆ,
ಪ್ರಾಂಶುಪಾಲರಿಗೆ ಹಾಗೂ ವಿದ್ಯಾರ್ಥಿಗಳಿಗೆ ಸೂಚನೆಗಳು
(ಎಲ್ಲಾ ಬಿ.ಎಡ್.ಕಾಲೇಜಿನ ಸೂಚನಾ ಫಲಕದ ಮೇಲೆ ಕಡ್ಡಾಯವಾಗಿ ಪ್ರಕಟಿಸುವುದು)

1. ಪ್ರತಿ ವಿದ್ಯಾರ್ಥಿಯ ಹಾಜರಾತಿ ಥಿಯರಿ ತರಗತಿಯಲ್ಲಿ 80% ಮತ್ತು ಆಂತರಿಕ ಚಟುವಟಿಕೆಗಳಲ್ಲಿ 92% ರಷ್ಟು ಕಡ್ಡಾಯವಾಗಿ ಇರಬೇಕು.
2. ವಿದ್ಯಾರ್ಥಿಯ ಆಂತರಿಕ ಚಟುವಟಿಕೆಗೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ಉಪನ್ಯಾಸಕರು ನೂರಕ್ಕೆ ನೂರರಷ್ಟು ಅಂಕಗಳು ನೀಡಿದರೆ ಅದಕ್ಕೆ ಸೂಕ್ತ ಕಾರಣ ಹಾಗೂ ಸ್ಪಷ್ಟೀಕರಣ ನೀಡಬೇಕು ಹಾಗೂ ಆಂತರಿಕ ಚಟುವಟಿಕೆಗಳ ಅಂಕಗಳ ಸಮನ್ವಯ ಸಮಿತಿಯ(**IACO-C**) ಮುಂದೆ ಅದಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಹಾಜರುಪಡಿಸಬೇಕು.
3. ವಿದ್ಯಾರ್ಥಿಯು ತನ್ನ ಎಲ್ಲಾ ಚಟುವಟಿಕೆಗಳನ್ನು ನಿಗದಿತ ಸಮಯದಲ್ಲಿ ಮುಗಿಸಬೇಕು ಮತ್ತು ಯಾವುದೇ ಒಂದು ಇಲ್ಲವೇ ಕೆಲವು ಚಟುವಟಿಕೆಗಳು/ದತ್ತ ಯೋಜನೆಗಳು ಅಪೂರ್ಣಗೊಳಿಸದಲ್ಲಿ ಅಂತಹ ವಿದ್ಯಾರ್ಥಿಯನ್ನು ಗೈರುಹಾಜರೆಂದು ಪರಿಗಣಿಸಲಾಗುವುದು. (ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯದ ಪರೀಕ್ಷಾ ನಿಯಮಾವಳಿಯ ಪ್ರಕಾರ)
4. ಇಂತಹ ವಿದ್ಯಾರ್ಥಿಗಳು ಆ ಸೆಮಿಸ್ಟರ್‌ನಲ್ಲಿ ವಿಶ್ವವಿದ್ಯಾನಿಲಯ ನಿರ್ಧರಿಸಿದ ದಂಡವನ್ನು ಪಾವತಿಸಿ ಅನುಮತಿ ಪಡೆದು **IACO-C** ಸಮಿತಿಯ ಮುಂದೆ ಹಾಜರಾಗಬೇಕು.
5. ಯುಯುಸಿಎಮ್‌ಎಸ್ ನಲ್ಲಿ ನಮೂದಾದ ಆಂತರಿಕ ಅಂಕಗಳ ಮುದ್ರಿತ ಪಟ್ಟಿಯನ್ನು ಮಾನ್ಯ ಕುಲಸಚಿವರು (ಮೌಲ್ಯಮಾಪನ) ಇವರ ವಿಭಾಗಕ್ಕೆ ವಿಶ್ವವಿದ್ಯಾನಿಲಯದ ಇ-ಮೇಲ್ (registrarevrur@gmail.com) ಮುಖಾಂತರ_ಸಮಿತಿ ಸಮೀಕ್ಷಿಸಿದ ನಂತರ ಕಳುಹಿಸಿಕೊಡಬೇಕು.
6. ವಿದ್ಯಾರ್ಥಿಗಳು ಕಡ್ಡಾಯವಾಗಿ **IACO-C** ಸಮಿತಿಯು ನಿಗದಿಪಡಿಸಿದ ಸಮಯ ಮತ್ತು ದಿನಾಂಕದಂದು ಭೌತಿಕವಾಗಿ ಹಾಜರಿರಬೇಕು, ಒಂದು ವೇಳೆ ಹಾಜರಾಗದಿದ್ದರೆ ಅಂತಹ ವಿದ್ಯಾರ್ಥಿಗಳನ್ನು ಗೈರು ಹಾಜರಿ ಎಂದು ಪರಿಗಣಿಸಲಾಗುವುದು. ನಂತರದಲ್ಲಿ ಈ ಸಮಿತಿಯ ಮುಂದೆ ಹಾಜರಾಗಲು ಅವಕಾಶವಿಲ್ಲ. ವಿದ್ಯಾರ್ಥಿಗಳು ಕಾಲೇಜಿನ ಸಮವಸ್ತ್ರದೊಂದಿಗೆ ಆಂತರಿಕ ಚಟುವಟಿಕೆಗಳ ಸಮನ್ವಯ ಸಮಿತಿಯ ಮುಂದೆಹಾಜರಾಗಬೇಕು.
7. ಕಾಲೇಜಿನ ಪ್ರಾಂಶುಪಾಲರು, ಬೋಧಕ ವರ್ಗದವರು ಮತ್ತು ವಿದ್ಯಾರ್ಥಿಗಳು ಸಮನ್ವಯ ಸಮಿತಿಗೆ ಯಾವುದೇ ರೀತಿಯ ಶಿಫಾರಸ್ಸು ಮತ್ತು ಒತ್ತಡಗಳನ್ನು ತರಬಾರದು, ಹಾಗೂ ಆಂತರಿಕ ಚಟುವಟಿಕೆಯ ಅಂಕಗಳ ಸಮನ್ವಯ ಸಮಿತಿಯ ವಿಕ್ಷಣೆಯ ಸಮಯದಲ್ಲಿ ಕಾಲೇಜಿನ ಆಡಳಿತ ಮಂಡಳಿಯ ಸದಸ್ಯರು ಅಥವಾ ಇನ್ನಿತರರು ಭಾಗವಹಿಸಲು ಅವಕಾಶವಿರುವುದಿಲ್ಲ. ಹಾಗೇನಾದರೂ ಕಂಡುಬಂದರೆ ಅಂತಹ ಕಾಲೇಜಿನ ವಿರುದ್ಧ ವಿಶ್ವವಿದ್ಯಾಲಯದ ನಿಯಮಾವಳಿ ಪ್ರಕಾರ ಕ್ರಮ ತೆಗೆದುಕೊಳ್ಳಲಾಗುತ್ತದೆ.
8. ವಿದ್ಯಾರ್ಥಿಗಳ ಆರೋಗ್ಯದ ಸಮಸ್ಯೆ ಅಥವಾ ಇನ್ಯಾವುದೇ ಕಾರಣಗಳಿದ್ದಲ್ಲಿ ಅದು ಅನಿವಾರ್ಯವಾದಲ್ಲಿ ಅದಕ್ಕೆ ಸಂಬಂಧಿಸಿದ ಎಲ್ಲಾ ದಾಖಲಾತಿಗಳೊಂದಿಗೆ ಮುಂದೆ **IACO-C** ನಿಗದಿಪಡಿಸಿದ ದಿನದಂದು ಅಂತಹ ವಿದ್ಯಾರ್ಥಿಗಳು ಕುಲಸಚಿವರು ಮೌಲ್ಯಮಾಪನ ವಿಭಾಗದಲ್ಲಿ ಹಾಜರಾಗವುದಕ್ಕೆ ಅವಕಾಶ ನೀಡಲಾಗಿದೆ.
9. ಕಾಲೇಜಿನ ಪ್ರಾಂಶುಪಾಲರು ಆಂತರಿಕ ಅಂಕಗಳ ಪಟ್ಟಿಯಲ್ಲಿನ ಅಂಕಗಳು ಹಾಗೂ ಯುಯುಸಿಎಮ್‌ಎಸ್ (UUCMS)ನಲ್ಲಿ ನಮೂದಿಸಿದ ಅಂಕಗಳಲ್ಲಿ ವ್ಯತ್ಯಾಸ ಇರದಂತೆ ನೋಡಿಕೊಳ್ಳಬೇಕು. ಹಾಗೇನಾದರೂ ಆದಲ್ಲಿ ಪ್ರಾಂಶುಪಾಲರೇ ಅದಕ್ಕೆ ನೇರ ಹೊಣೆಗಾರರಾಗುತ್ತಾರೆ ಹಾಗೂ ವಿಶ್ವವಿದ್ಯಾನಿಲಯದ ನಿಯಮಾವಳಿ ಪ್ರಕಾರ ಈ ವಿಷಯದಲ್ಲಿ ಕ್ರಮ ತೆಗೆದುಕೊಳ್ಳಲಾಗುತ್ತದೆ.

10. ಯಾವುದೇ ವಿದ್ಯಾರ್ಥಿ/ವಿದ್ಯಾರ್ಥಿನಿಯು ನಿಗದಿಪಡಿಸಿದ ದಿನ **IACO-C** ಸಮಿತಿಯ ಮುಂದೆ ಗೈರು ಹಾಜರಾದರೆ, ಅಪೂರ್ಣದತ್ತ ಯೋಜನೆಗಳ, Incomplete Records ಹಾಗೂ Multiple Handwriting ಇದ್ದರೆ ಅಂತಹ ವಿದ್ಯಾರ್ಥಿ/ವಿದ್ಯಾರ್ಥಿನಿಯ ಪಟ್ಟಿಯನ್ನು ಆಯಾ ಕಾಲೇಜಿನ **IACO-C** ಸಮಿತಿಯು ಪ್ರಾಂಶುಪಾಲರ ಮುಖಾಂತರ ಆ ದಿನವೇ ಕುಲಸಚಿವರು(ಮೌಲ್ಯಮಾಪನ) ವಿಭಾಗಕ್ಕೆ ಇ–ಮೇಲ್ ಮೂಲಕ ಸಲ್ಲಿಸಬೇಕು.
11. ಎಲ್ಲಾ ಕಾಲೇಜುಗಳು ಕಡ್ಡಾಯವಾಗಿ **IACO-C** ಸಮಿತಿಯ ಎಲ್ಲಾ ಪ್ರಕ್ರೀಯೆಯನ್ನು **ಸಿ.ಸಿ ಕ್ಯಾಮರದ** ಮೂಲಕ ರೆಕಾರ್ಡ್ ಮಾಡಬೇಕು ಹಾಗೂ ವಿಶ್ವವಿದ್ಯಾಲಯದ ಮೌಲ್ಯಮಾಪನ ವಿಭಾಗಕ್ಕೆ ರೆಕಾರ್ಡ್ ಮಾಡಿದ ಎಲ್ಲಾ ದೃಶ್ಯಗಳನ್ನು ಪೆನ್‌ಡ್ರೈವ್ ಮೂಲಕ ಸಲ್ಲಿಸಬೇಕು.
12. ಯಾವುದೇ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಗೈರು ಹಾಜರಾತಿ, ದತ್ತ ಯೋಜನೆಗಳ ಅಪೂರ್ಣ, Incomplete Records, Multiple Handwriting ಇದ್ದರೆ **IACO-C** ಸಮಿತಿ ವಿಧಿಸಿದ ದಂಡವನ್ನು ನೇರವಾಗಿ ವಿಶ್ವವಿದ್ಯಾಲಯದ ಖಾತೆಗೆ ಆನ್‌ಲೈನ್ ಮೂಲಕ ಆ ದಿನವೇ ಪಾವತಿಸಬೇಕು.

ದಂಡ ಶುಲ್ಕದ ವಿವರ ಈ ಕೆಳಗಿನಂತಿದೆ.

ಕ್ರ.ಸಂ.	ವಿವರ	ದಂಡ ಶುಲ್ಕದ ವಿವರ (ರೂ.)
01	Absent(ಗೈರು ಹಾಜರಾದರೆ)	10,000.00
02	Incomplete Records (ಅಪೂರ್ಣ ದಾಖಲಾತಿ)/ Multiple Handwriting(ಬಹು ಬರವಣಿಗೆ)	5,000.00

13. ವಿದ್ಯಾರ್ಥಿಗಳು ದಂಡಶುಲ್ಕ ಪಾವತಿಸಿದ ರಸೀದಿಯನ್ನು ಆಯಾ ಕಾಲೇಜಿನ ಪ್ರಾಂಶುಪಾಲರಿಗೆ ಸಲ್ಲಿಸಬೇಕು. ವಿದ್ಯಾರ್ಥಿಗಳು ಸಲ್ಲಿಸಿದ ಎಲ್ಲಾ ರಸೀದಿಯನ್ನು ಪ್ರಾಂಶುಪಾಲರು ವಿಶ್ವವಿದ್ಯಾಲಯದ ಕುಲಸಚಿವರು ಮೌಲ್ಯಮಾಪನ ವಿಭಾಗಗಕ್ಕೆ ಸಲ್ಲಿಸಬೇಕು. ಪ್ರತಿ ಕಾಲೇಜಿನ ಪ್ರಾಂಶುಪಾಲರು ವಿದ್ಯಾರ್ಥಿಗಳು ಕಟ್ಟಬೇಕಾದ ದಂಡ ಶುಲ್ಕ ಮೊತ್ತವನ್ನು ನೇರವಾಗಿ ಆನ್‌ಲೈನ್ ಮೂಲಕ ಪಾವತಿಸುವಂತೆ ನಿರ್ದೇಶಿಸಬೇಕು ಹಾಗೂ ನೋಡಿಕೊಳ್ಳಬೇಕು.
14. **IACO-C** ಸಮಿತಿಯು ತಾನೇ ನಿಗಿದಿಪಡಿಸಿದ ದಿನಾಂಕ ಮತ್ತು ಸಮಯಕ್ಕೆ ಕಾಲೇಜುಗಳಿಗೆ ಭೇಟಿ ನೀಡುತ್ತಾರೆ. ಆಯಾ ಪ್ರಾಂಶುಪಾಲರು ಕಾಲೇಜಿನ ನೋಟಿಸ್ ಬೋರ್ಡ್‌ನ ಮೂಲಕ ಈ ವಿಷಯವನ್ನು ಎಲ್ಲಾ ವಿದ್ಯಾರ್ಥಿಗಳ ಗಮನಕ್ಕೆ ತರುವುದು.
15. ಎಲ್ಲಾ ವಿದ್ಯಾರ್ಥಿಗಳ ಆಂತರಿಕ ಅಂಕಗಳ ಪರಿಶೀಲನೆ ಹಾಗೂ ಅಂಕಗಳ ಮಾರ್ಪಡು ಮಾಡುವ ಅಧಿಕಾರ ಸಮಿತಿಗೆ ಇರುತ್ತದೆ.
16. ಆಂತರಿಕ ಅಂಕಗಳ ಸಮನ್ವಯ ಸಮಿತಿಯ(**IACO-C**) ಅಧ್ಯಕ್ಷರು ಮತ್ತು ಸಮಿತಿಯ ಸದಸ್ಯರು ತೆಗೆದುಕೊಂಡ ನಿರ್ಧಾರ ಅಂತಿಮವಾಗಿರುತ್ತದೆ.

for ಕುಲಸಚಿವರು (ಮೌಲ್ಯಮಾಪನ)
ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾನಿಲಯ, ರಾಯಚೂರು

ಪ್ರತಿಗಳು:

1. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿ/ಕುಲಸಚಿವರು ಅವರ ಆಪ್ತ ಸಹಾಯಕರು, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ, ರಾಯಚೂರು
2. ಶೈಕ್ಷಣಿಕ ವಿಭಾಗ, ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯ, ರಾಯಚೂರು
3. ಕಛೇರಿ ಪ್ರತಿ.